ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-3 Issue 5, MAR-APR 2022, Pp. 50-59.
©*IIMRD*, Mysuru

IIMRD JOURNALS

www.iimrd.com

# ಉಪ್ಪಾರರ ಮೌಖಿಕ ಕಥನ

**ಡಾ. ಎಸ್. ಆರ್. ಅಂಜನಪ್ಪ***

*ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರ. ದಾವಣಗೆರೆ.

**ಸಾರಾಂಶ: (Abstract)**

*ಪ್ರತಿಯೊಂದು ಸಮುದಾಯಕ್ಕೂ ತನ್ನದೇ ಆದ ಇತಿಹಾಸವಿರುತ್ತದೆ. ಆದರೆ ಲಿಖಿತ ಪರಂಪರೆಯಿಲ್ಲದ ಸಮುದಾಯಗಳ ಇತಿಹಾಸವನ್ನು ತಿಳಿಯುವುದು ತುಸು ಕಷ್ಟದ ಕೆಲಸ. ಏಕೆಂದರೆ ಒಂದು ಜನಾಂಗ ಅಥವ ಸಮುದಾಯದ ಸಂಸ್ಕೃತಿಯನ್ನು ಅರ್ಥ ಮಾಡಿಕೊಳ್ಳಬೇಕಾದರೆ ಆ ಸಮುದಾಯದ ಇತಿಹಾಸವನ್ನು ತಿಳಿದುಕೊಳ್ಳಬೇಕಾಗುತ್ತದೆ. ಏಕೆಂದರೆ ಸಂಸ್ಕೃತಿಯ ಒಳ ಬೇರುಗಳು ಆ ಸಮುದಾಯದ ಬದುಕಿನ ಕ್ರಮದಲ್ಲಿ ಅಡಕವಾಗಿರುತ್ತವೆ. ಸಂಸ್ಕೃತಿಯ ಈ ಒಳಬೇರುಗಳನ್ನು ತಿಳಿಯಬೇಕಾದರೆ ಆ ಸಮುದಾಯದ ಪ್ರಾಚೀನ ಲಕ್ಷಣಗಳನ್ನು ಅರಿಯಬೇಕಾಗುತ್ತದೆ. ಹಾಗಾಗಿ ಸಮುದಾಯದ ಬಗೆಗೆ ಪ್ರಚಲಿತವಿರುವ ಮೌಖಿಕ ಆಕರಗಳನ್ನು ಪರಿಭಾವಿಸಿ ಉಪ್ಪಾರರ ಮೌಖಿಕ ಪರಂಪರೆಯನ್ನು ಪ್ರಸ್ತುತ ಲೇಖನದಲ್ಲಿ ವಿಮರ್ಶಿಸಲಾಗಿದೆ.*

**ಮುಖ್ಯಪದಗಳು (Keywords):** ಉಪ್ಪಾರ ಸಮುದಾಯ, ಜನಾಂಗೀಯ ಇತಿಹಾಸ, ಮೌಖಿಕ ಕಥನ.

**ಪೀಠಿಕೆ**

ಯಾವುದೇ ಸಮಾಜ ಅಥವ ಸಮುದಾಯದ ಇತಿಹಾಸವೆಂದರೆ ಕೇವಲ ರಾಜಕೀಯ ಚರಿತ್ರೆಯಲ್ಲ. ಆದರೆ ಬರೀ ರಾಜಕೀಯ ಚರಿತ್ರೆಯ ಭಾಗವಾಗಿಯಷ್ಟೆ ನಮ್ಮ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಆರ್ಥಿಕ ಇತ್ಯಾದಿ ಘಟನೆಗಳು ಚಿತ್ರಿತವಾಗಿವೆ. ರಾಜ ಮಹಾರಾಜರುಗಳ, ಅಧಿಕಾರಿಗಳ ವೈಭವದ ಬದುಕಿಗೆ ಕಾರಣರಾದ ಜನಸಾಮಾನ್ಯರ ಬದುಕು ನಮ್ಮ ಇತಿಹಾಸದಲ್ಲಿ ಸಂಪೂರ್ಣವಾಗಿ ನಿರ್ಲಕ್ಷಿಸಲ್ಪಟ್ಟಿದೆ. ಯಾವಾಗಲೂ ಸಮುದಾಯಗಳ ಬದುಕು ಜನ ಸಮುದಾಯಗಳ ನೆನಪುಗಳಲ್ಲಿ ಅಡಗಿರುತ್ತದೆಯೇ ಹೊರತು ಬರಹದ ದಾಖಲೆಗಳಲ್ಲಿ ಅಲ್ಲ. ಆದ್ದರಿಂದ ನಮಗಿಂದು ಬೇಕಾಗಿರುವುದು ಸಮುದಾಯದ ಈ ಮೌಖಿಕ ಚರಿತ್ರೆ ಇದು ಆಯಾ ಸಮುದಾಯದ ನೆನಪಿನಲ್ಲಿ ಉಳಿದಿರುತ್ತದೆ.

ಇಂತಹ ಜನಸಾಮಾನ್ಯರ ಇತಿಹಾಸವನ್ನು ತಿಳಿಯದೆ ಚರಿತ್ರೆಯ ಅಧ್ಯಯನ ಪರಿಪೂರ್ಣವೆನಿಸುವುದಿಲ್ಲ. ಫ್ರೆಂಚ್ ತತ್ವಜ್ಞಾನಿ ವೋಲ್ಟೇರ್ ಹೇಳುವಂತೆ (Voltaire) *"ಒಂದು ನಾಡಿನ ಇತಿಹಾಸವೆಂದರೆ ಆ ನಾಡನ್ನು ಕಾಲದಿಂದ ಕಾಲಕ್ಕೆ ಆಳಿದ ರಾಜರ ಇತಿಹಾಸವೆಂಬ ಭಾವನೆ ಪ್ರಚಲಿತವಾಗಿದೆ. ನಾಡು ಎಂದರೆ ಅದನ್ನು ಆಳಿದ ರಾಜರು ಮಾತ್ರವಲ್ಲ, ಅಲ್ಲಿ ಬದುಕಿದ ಸಾಮಾನ್ಯ*

*Please cite this article as: ಡಾ. ಎಸ್. ಆರ್. ಅಂಜನಪ್ಪ.* (2022). ಉಪ್ಪಾರರ ಮೌಖಿಕ ಕಥನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(5). ಪು.ಸಂ.* 50–59.

*ಜನರೂ ಆಗಿದ್ದಾರೆ. ಒಂದು ದೇಶದ ನಿಜವಾದ ಇತಿಹಾಸವೆಂದರೆ ಆ ಸಾಮಾನ್ಯ ಜನತೆಯ ಇತಿಹಾಸ"* ಎಂಬುದಾಗಿ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾನೆ. ಆದ್ದರಿಂದ ಜನ ಸಾಮಾನ್ಯರ ಸಾಂಸ್ಕೃತಿಕ ಬದುಕಿನ ವೈಶಿಷ್ಟ್ಯತೆಗಳೇ ಒಂದು ದೇಶದ ನಿಜವಾದ ಇತಿಹಾಸವಾಗಿರುತ್ತವೆ. ಈ ಹಿನ್ನೆಲೆಯಲ್ಲಿ ಉಪ್ಪಾರರ ಮೌಖಿಕ ಪರಂಪರೆಯ ಅರಿವು ಮಹತ್ವದ್ದಾಗುತ್ತದೆ.

ಭಾರತದಲ್ಲಿರುವ ಸಾವಿರಾರು ಜಾತಿಗಳಲ್ಲಿ ಒಂದಾಗಿರುವ ಉಪ್ಪಾರ ಜಾತಿಯು ಪ್ರಾಚೀನ ಸಮಾಜದಲ್ಲಿದ್ದ ಹದಿನೆಂಟು ಸಾಂಪ್ರದಾಯಿಕ ವೃತ್ತಿ ಜಾತಿಗಳಲ್ಲಿ ಒಂದಾಗಿದೆ. ಉಪ್ಪು ತಯಾರಿಕೆಯು ಇವರ ಪ್ರಮುಖ ವೃತ್ತಿಯಾಗಿತ್ತು. ಮಣ್ಣಿನ ಮೂಲಕ ನಾಗರಿಕತೆಯ ಬೆಳವಣಿಗೆಗೆ ಕಾರಣರಾದ, ಮಣ್ಣಿನಿಂದ ಮಾಡಬಹುದಾದ ಎಲ್ಲ ಬಗೆಯ ವೃತ್ತಿಗಳ ತಂತ್ರಜ್ಞಾನ ಉಪ್ಪಾರರಿಂದಲೇ ಶೋಧಿತವಾಗಿರುತ್ತವೆ. ನಾಗರೀಕತೆಯ ಬೆಳವಣಿಗೆಗೆ ಕಾರಣರಾದ ಭಾರತೀಯ ಸಮಾಜ ಸಂಸ್ಕೃತಿಗೆ ಅಪಾರ ಕಾಣಿಕೆಯನ್ನಿತ್ತ ಜನಾಂಗವೊಂದರ ಮೌಖಿಕ ಚರಿತ್ರೆಯ ಅಧ್ಯಯನವನ್ನು ಈ ಲೇಖನದಲ್ಲಿ ಮಾಡಲಾಗಿದೆ.

**ಮೌಖಿಕ ಆಕರಗಳು**

ಮೌಖಿಕ ಆಕರಗಳು ಇತಿಹಾಸದ ಘಟನೆಗಳನ್ನು ತಲೆಮಾರಿನಿಂದ ತಲೆಮಾರಿಗೆ ಸಂವಹನಗೊಳಿಸುವ ಮಾಧ್ಯಮಗಳಾಗಿರುತ್ತವೆ. ಅವುಗಳಲ್ಲಿರುವ ಇತಿಹಾಸವನ್ನು ಕಟ್ಟುಕತೆಯೆಂದು ಅಲಕ್ಷ್ಯ ಮಾಡಿದಲ್ಲಿ ಇಡೀ ಸಾಮಾಜಿಕ ಮತ್ತು ಸಾಂಸ್ಕೃತಿಕ ಇತಿಹಾಸಕ್ಕೆ ಅಪಾರ ನಷ್ಟವಾಗುತ್ತದೆ. ಆದ್ದರಿಂದ ಒಂದು ನಾಡಿನ, ಒಂದು ಸಮುದಾಯದ ಇತಿಹಾಸವನ್ನು ವಿವಿಧ ಮೂಲಗಳಿಂದ ಸಂಗ್ರಹಿಸುವಾಗ ಕಂಠಸ್ಥ ಆಕರಗಳನ್ನು ನಿರಾಕರಿಸುವಂತಿಲ್ಲ. ಇಂತಹ ಕಂಠಸ್ಥ ಆಕರಗಳಾದ ಐತಿಹ್ಯಗಳಲ್ಲಿ ಉಪ್ಪಾರರನ್ನು ಕುರಿತ ಐತಿಹ್ಯಗಳನ್ನು ಇಲ್ಲಿ ಪರಿಭಾವಿಸಲಾಗಿದೆ.

ಯಾವುದೇ ಒಂದು ಜನಾಂಗದ ಮೂಲವನ್ನು ಅರಿಯಬೇಕಾದಾಗ ಶತ ಶತಮಾನಗಳಿಂದ ಆ ಜನಾಂಗದಲ್ಲಿ ಮೌಖಿಕವಾಗಿ ಉಳಿದು ಬಂದಿರುವ ಐತಿಹ್ಯಗಳನ್ನು ಆಧಾರವಾಗಿಟ್ಟುಕೊಂಡು ಆ ಜನಾಂಗದ ಮೂಲವನ್ನು ಪರಿಭಾವಿಸಬೇಕಾಗುತ್ತದೆ. ಐತಿಹ್ಯಗಳಿಂದ ಸತ್ಯದ ಜಾಡನ್ನು ಹುಡುಕುವುದು ಕಷ್ಟವಾದರೂ ಒಂದು ಜನಾಂಗದ ಮೂಲವನ್ನು ಹುಡುಕುವಲ್ಲಿ ಅವು ಪ್ರಮುಖ ಆಕರಗಳಾಗುತ್ತವೆ. ಆದ್ದರಿಂದ ಒಂದು ಜನಾಂಗದಲ್ಲಿ ತಲ ತಲಾಂತರಗಳಿಂದ ಬಂದ ಐತಿಹ್ಯಗಳನ್ನು ಕ್ಷುಲ್ಲಕವೆಂದು ನಿರಾಕರಿಸುವಂತಿಲ್ಲ. 'ಐತಿಹ್ಯಗಳು ಮೌಖಿಕ ಸಂಪ್ರದಾಯದಲ್ಲಿ ಉಳಿದುಕೊಂಡು ಬಂದಿರುವ, ಹಿಂದೆ ವಾಸ್ತವವಾಗಿ ನಡೆದದ್ದೇ ಎಂಬುದಾಗಿ ಅದರ ಪ್ರಸಾರಕರಿಗೆ ವಿಶ್ವಾಸವಿರುವ ಘಟನೆಗಳ ನಿರೂಪಣೆಗಳಾಗಿರುತ್ತವೆ'.

ಒಂದು ದೃಷ್ಟಿಯಿಂದ ಇವು ಜನಪದ ಇತಿಹಾಸ. ಇಲ್ಲಿ ಲಿಖಿತ ದಾಖಲೆಗಳೇನು ಇರುವುದಿಲ್ಲ. ಲಿಖಿತ ದಾಖಲೆಗಳಿಗೂ ಐತಿಹ್ಯದಲ್ಲಿ ಹೇಳಲಾಗಿರುವ ವಿಚಾರಗಳಿಗೂ ಕೆಲವೊಮ್ಮೆ ಸಾಮ್ಯ, ಸಂಬಂಧ ಕಂಡುಬರಬಹುದು ಅಥವಾ ವ್ಯತ್ಯಾಸವೂ ಕಂಡುಬರಬಹುದು. ಅಂದರೆ ಐತಿಹ್ಯವೆಂದು ನಾವಿಂದು ತಿಳಿಯುವ ಈ ಜನಪದ ಇತಿಹಾಸವು ನೈಜ ಘಟನೆಗಳ ನಿರೂಪಣೆಯಾಗಿರಬಹುದು, ಅಥವಾ ಕಲ್ಪಿತ ಅಂಶಗಳ ನಿರೂಪಣೆಯಾಗಿರಬಹುದು. ಆದರೂ ಐತಿಹ್ಯಗಳಲ್ಲಿ ನೈಜ ಘಟನೆಗಳ ಸಣ್ಣ ಎಳೆಯೊಂದಿದ್ದು, ಅದರ ಸುತ್ತ ಕಲ್ಪಿತಾಂಶಗಳು ಹಬ್ಬಿಕೊಂಡಿರುತ್ತವೆ. ಆಯಾ ಜನಾಂಗಗಳಲ್ಲಿ ಪ್ರಚಲಿವಿರುವ ಐತಿಹ್ಯಗಳ

ಮೂಲಕ ಜನಾಂಗದ ಬಗೆಗಿನ ಕಥನವನ್ನು ತಿಳಿಯಬಹುದು. ಈ ಹಿನ್ನೆಲೆಯಲ್ಲಿ ಉಪ್ಪು ಮತ್ತು ಉಪ್ಪಾರರನ್ನು ಕುರಿತ ಐತಿಹ್ಯಗಳನ್ನು ಪರಿಶೀಲಿಸಲಾಗಿದೆ.

ಒಂದು ಐತಿಹ್ಯದ ಪ್ರಕಾರ (ಚೀನಿ ಐತಿಹ್ಯ) ಒಮ್ಮೆ ಚೀನಿ ರೈತನೊಬ್ಬ ಕಡಲ ತಟದಲ್ಲಿ ಹೋಗುತ್ತಿದ್ದಾಗ, ಮರಳ ರಾಶಿಯ ಮೇಲೆ ಕೊಕ್ಕರೆಯೊಂದು ಕುಳಿತಿರುವುದನ್ನು ಕಂಡು, ಅಲ್ಲಿ ನಿಧಿ ಇರಲೇ ಬೇಕು ಎಂದುಕೊಂಡು ಅಗೆದಾಗ ಅಲ್ಲಿ ಬಿಳಿಯಾದ ಒರಟು–ಒರಟಾದ ಒಂದು ವಸ್ತು ಸಿಕ್ಕಿತಂತೆ. ಅದು ಏನೆಂದು ಅವನಿಗೆ ಗೊತ್ತಿಲ್ಲ. ಆದರೂ ಅದು ಕೊಕ್ಕರೆ ಕುಳಿತಿರುವ ಜಾಗದಲ್ಲಿ ಸಿಕ್ಕಿದ್ದರಿಂದ ಅದು ಅಮೂಲ್ಯವಾದದ್ದೇ ಇರಬೇಕೆಂದು ಅದನ್ನು ತೆಗೆದು ಕೊಂಡು ಹೋಗಿ ರಾಜನಿಗೆ ನಮಸ್ಕರಿಸಿ ಅದು ಸಿಕ್ಕಿದ ಬಗೆಯನ್ನು ತಿಳಿಸಿದನು. ಆದರೆ ರಾಜನಿಗೆ ಸಿಟ್ಟು ಬಂದು ಸೇವಕರನ್ನು ಕರೆದು ರೈತನನ್ನು ಹಳ್ಳಕ್ಕೆ ತಳ್ಳುವಂತೆ ಆದೇಶಿಸಿದನು. ರೈತ ಕೊಟ್ಟಿದ್ದ ಆ ಬಿಳಿ ಹೆಂಟೆಯನ್ನು ಅಡುಗೆ ಮಾಡುವವನ ಕೈಗೆ ಕೊಟ್ಟು ಬಿಸಾಡುವಂತೆ ಹೇಳಿದನು. ಆದರೆ ಅಡುಗೆ ಮಾಡುವವನು ಅದನ್ನು ಅಡುಗೆಮನೆಯ ಕಟ್ಟೆಯೊಂದರ ಮೇಲಿಟ್ಟು ಮರೆತನಂತೆ.

ಒಂದು ದಿನ ಅವನು ರಾಜನಿಗೆ ಅಡುಗೆ ಮಾಡಿ ಅದನ್ನು ತೆಗೆದು ಕೊಂಡು ಹೋಗುವಾಗ ಕಟ್ಟೆಯ ಮೇಲೆ ಕರಗಿದ್ದ ಆ ಬಿಳಿ ಹೆಂಟೆಯ ಹನಿಗಳು ಊಟದ ತಟ್ಟೆಯಲ್ಲಿ ಬಿದ್ದವಂತೆ, ಆದರೆ ಅಡುಗೆ ಮಾಡುವವನಿಗೆ ಮತ್ತೆ ಅಡುಗೆ ಮಾಡುವ ಮನಸ್ಸು ಇಲ್ಲದ್ದರಿಂದ ಅದನ್ನೇ ತೆಗೆದುಕೊಂಡು ಹೋಗಿ ರಾಜನಿಗೆ ಕೊಟ್ಟನು. ಆ ಅಡುಗೆ ರಾಜನಿಗೆ ತುಂಬಾ ಹಿಡಿಸಿತಲ್ಲದೆ ಏನೋ ಹೊಸ ಪದಾರ್ಥ ಬಳಸಿರುವುದು ರಾಜನ ಅರಿವಿಗೆ ಬಂದಿತು. ಆಗ ರಾಜನು ಅಡುಗೆಯವನನ್ನು ಕರೆಸಿ ಕೇಳಲಾಗಿ ಅಡುಗೆಯವನು ನಡೆದುದೆಲ್ಲವನ್ನೂ ರಾಜನಿಗೆ ಹೇಳಿದನು. ಆಗ ಅಡುಗೆ ಮನೆಯ ಕಟ್ಟೆಯ ಮೇಲಿದ್ದ ಆ ಬಿಳಿ ಹೆಂಟೆಯನ್ನು ತೊಳೆದು ಮುಂದೆ ಅಡುಗೆಗೆ ಅದನ್ನೇ ಬಳಸತೊಡಗಿದರು. ನಂತರ ಅದು ಸಿಕ್ಕಿದ ಸ್ಥಳವೂ ಪತ್ತೆಯಾಯಿತು. ಇದು ಚೀನಾದಲ್ಲಿ ಉಪ್ಪು ಬಳಕೆಗೆ ಬಂದ ಕಥೆ.

ಮತ್ತೊಂದು ಐತಿಹ್ಯದ ಪ್ರಕಾರ ಬೇಟೆಯನ್ನೇ ತನ್ನ ಮೂಲ ಕಸುಬನ್ನಾಗಿಸಿಕೊಂಡಿದ್ದ ಆದಿ ಮಾನವ ಒಮ್ಮೆ ಬೇಟೆಗೆ ಹೋದ ಸಂದರ್ಭದಲ್ಲಿ ಕಾಡು ಪ್ರಾಣಿಗಳು ಒಂದೆಡೆ ನೆಲವನ್ನು ನೆಕ್ಕುತ್ತಿದ್ದುದನ್ನು ಕಂಡು, ಕುತೂಹಲಗೊಂಡು ತಾನೂ ನೆಲದ ಮೇಲಿನ ಮಣ್ಣನ್ನು ನೆಕ್ಕಿದನು. ಆ ಮಣ್ಣು ರುಚಿಯಾಗಿದ್ದುದರಿಂದ ಬೇಟೆಯಾಡಿದ ಪ್ರಾಣಿಗಳ ಮಾಂಸವನ್ನು ಆ ಮಣ್ಣಿನೊಂದಿಗೆ ಬೆರಸಿ ತಿಂದನು. ಮಾಂಸ ರುಚಿಯಾಗಿದುದ್ದರಿಂದ ಮಣ್ಣಿನಿಂದ ಕ್ರಮೇಣ ಉಪ್ಪನ್ನು ಮಾಡುವುದನ್ನು ಕಲಿತವರೇ ಉಪ್ಪಾರರು.

ಈ ಮೇಲಿನ ಎರಡೂ ಐತಿಹ್ಯಗಳನ್ನು ಗಮನಿಸಿದಾಗ ಐತಿಹ್ಯ ಒಂದರಲ್ಲಿ ಚೀನಾದಲ್ಲಿ ಉಪ್ಪಿನ ಬಳಕೆ ಹೇಗೆ ಬಂತೆಂಬ ಬಗ್ಗೆ ವಿವರಗಳನ್ನು ನೀಡುತ್ತದೆ. ಆದರೆ ಅದು ಅಡುಗೆಯವನ ಅಸಡ್ಡೆತನ ಮತ್ತು ಸೋಮಾರಿತನದಿಂದಾಗಿ ಉಪ್ಪಿನ ರುಚಿ ಆಕಸ್ಮಿಕವಾಗಿ ತಿಳಿದು ಬಂದಿರುವುದು ಗೊತ್ತಾಗುತ್ತದೆ. ಈ ಕಥೆ ಒಂದು ರೀತಿಯಲ್ಲಿ ಬುದ್ದಿವಂತರು ಹೊಸೆದು ಕಟ್ಟಿದ ಕಥೆಯೆನಿಸುತ್ತದೆ. ಆದರೆ ಎರಡನೇ ಐತಿಹ್ಯವನ್ನು ಗಮನಿಸಿದಾಗ ಅದು ವಾಸ್ತವಕ್ಕೆ ಹೆಚ್ಚು ಹತ್ತಿರವಾಗಿರುವುದು ಕಂಡುಬರುತ್ತದೆ. ಪ್ರಾಣಿಗಳು ಈಗಲೂ ಮಣ್ಣನ್ನು ನೆಕ್ಕುವುದು ಸರ್ವೆಸಾಮಾನ್ಯ. ಇದನ್ನು ನೋಡಿದ ಆದಿ ಮಾನವ ತಾನೂ ಆ ಪ್ರಾಣಿಗಳಂತೆ ಮಣ್ಣನ್ನು ನೆಕ್ಕಿರಬೇಕು. ಆ ಮಣ್ಣಿನಿಂದ ಅವನಿಗೆ ಎಂದೂ ಇಲ್ಲದ ರುಚಿ ದೊರೆತು, ಕ್ರಮೇಣ ಮಣ್ಣಿನಿಂದ

ಉಪ್ಪಿನ ಅಂಶವನ್ನು ಬೇರ್ಪಡಿಸಿಕೊಂಡು ಉಪ್ಪನ್ನು ಮಾಡಿಕೊಳ್ಳುವುದನ್ನು ಕಲಿತಿರಬೇಕು. ಅಂದರೆ ಮೊದಲು ಉಪ್ಪಿನ ಬಳಕೆ ಬಂದುದು ಮಣ್ಣಿನಿಂದಲೇ ಎಂಬುದನ್ನು ಈ ಎರಡೂ ಕಥೆಗಳು ಹೇಳುತ್ತವೆ.

ಉಪ್ಪಾರರು ತಮ್ಮ ಕುಲದ ಹುಟ್ಟು ಅಥವ ಜನಾಂಗದ ಮೂಲವನ್ನು ಕುರಿತಂತೆ ಹೇಳಿಕೊಳ್ಳುವ ಐತಿಹ್ಯಗಳು ಹೀಗಿವೆ. ಸಮುದಾಯದ ಹಿರಿಯರು ಹೇಳುವಂತೆ 'ಜನಾಂಗದ ಮೂಲ ಪುರುಷ ಹುಟ್ಟಿದ್ದು ಪರಮೇಶ್ವರನ ಬೆವರಿನಿಂದ ಎಂದು ಹೇಳುತ್ತಾರೆ. ಒಮ್ಮೆ ದೇವಾನುದೇವತೆಗಳು ಊಟಕ್ಕೆ ಕುಳಿತಿದ್ದಾಗ ಊಟ ಸಪ್ಪೆಯಾಗಿತ್ತಂತೆ. ಆಗ ಪರಮೇಶ್ವರನು ತನ್ನ ಬೆವರಿನಿಂದ ಒಬ್ಬ ಮನುಷ್ಯನನ್ನು ಸೃಷ್ಟಿ ಮಾಡಿ ನೀನು ಭೂಲೋಕಕ್ಕೆ ಹೋಗಿ ಮಣ್ಣಿನಿಂದ ಉಪ್ಪು ಮಾಡಬೇಕು ಅಂತ ಅಪ್ಪಣೆ ಮಾಡಿ ಅವನಿಗೆ ಒಂದು ಕಾವಲಿ ಮತ್ತು ಒಂದು ಕರಗತ್ತಿ ಕೊಟ್ಟನು. ಪರಮೇಶ್ವರನ ಮಾನಸ ಪುತ್ರನಾದ ಇವನು ಭೋಲೋಕಕ್ಕೆ ಬಂದು ಚವುಳು ಮಣ್ಣು ತಂದು ಕತ್ತಿ ಕೆಳಗೆ ಮಡಕೆ ಹೂಳಿ ಮಣ್ಣಿನಿಂದ ಸಾರವನ್ನು ಮಡಕೆಗೆ ಇಳಿಸಿ ಆ ನೀರು ತೆಗೆದು ಕಾವಲಿಗೆ ಸುರಿದು ಉಪ್ಪು ತಯಾರಿಸಿ ದೇವತೆಗಳಿಗೆ ಕೊಟ್ಟನು. ಇದರಿಂದ ದೇವತೆಗಳು ಸಂತೃಪ್ತಿಗೊಂಡು ಅವರಿಗೆ ಈ ವೃತ್ತಿಯನ್ನೇ ಕರುಣಿಸಿದರಂತೆ. ಹೀಗೆ ಮಣ್ಣಿನಿಂದ ಉಪ್ಪನ್ನು ತಯಾರಿಸಿ ಊಟದ ರುಚಿ ಹೆಚ್ಚಿಸಿದ್ದರಿಂದ ನಮಗೆ ಉಪ್ಪಾರರು ಅಂತ ಹೆಸರು ಬಂತು. ಆದಿಯಲ್ಲಿ ಉಪ್ಪು ತಯಾರಿಸಿದ ಆ ವ್ಯಕ್ತಿಯೇ ನಮ್ಮ ಜನಾಂಗದ ಮೂಲ ಪುರುಷನೆಂದು ಹೇಳಿಕೊಳ್ಳುತ್ತಾರೆ.

ತಮಿಳುನಾಡಿನ ಉಪ್ಪಿಲಿಯನ್‌ರಲ್ಲಿ ಪ್ರಚಲಿತದಲ್ಲಿದ್ದ ಒಂದು ಕಥೆಯನ್ನು ಥರ್ಸ್ಟನ್‌ರವರು ತನ್ನ ಗ್ರಂಥದಲ್ಲಿ ಉಲ್ಲೇಖ ಮಾಡಿದ್ದಾನೆ. ಆ ಕಥೆಯ ಪ್ರಕಾರ ದೇವತೆಗಳ ಅಡಿಗೆಗೆ ಉಪ್ಪು ತಯಾರು ಮಾಡುತ್ತಿದ್ದವನೇ ಉಪ್ಪಾರರ ಮೂಲ ಪುರುಷ. ಒಮ್ಮೆ ಅವನ ಹೆಂಡತಿ ಗಾಜಿನ ಬಳೆಗಳಿಗೆ ಮಾರು ಹೋಗಿ ಉಪ್ಪು ಕೊಟ್ಟು ಬಳೆಯನ್ನು ಪಡೆದುಕೊಂಡಳು. ಆಗ ದೇವತೆಗಳು ಆಕೆಯ ಗಂಡನ ಮೇಲೆ ಸಿಟ್ಟಾದರು. ಇದರಿಂದ ರೇಗಿದ ಅವನು ತನ್ನ ಹೆಂಡತಿಯನ್ನು ಒಲೆಯಲ್ಲಿ ಹಾಕಿ ಕೊಲ್ಲಲು ಯತ್ನಿಸಿದನು. ಆಗ ಆಕೆ ಒಲೆ ಹಿಂದಿನ ತೂತಿನಿಂದ ಪಾರಾದಳಂತೆ. ಈ ಕಥೆಯ ಹಿನ್ನೆಲೆ ಇರುವುದರಿಂದಲೇ ಉಪ್ಪಾರ ಹೆಂಗಸರು ಗಾಜಿನ ಬಳೆಗಳನ್ನು ತೊಡುವುದಿಲ್ಲ ಮತ್ತು ಅವರ ಒಲೆಗಳಿಗೆ ಹಿಂದೆ ತೂತಿರುತ್ತವಂತೆ.

ಜನಾಂಗದ ಮೂಲವನ್ನು ಕುರಿತಂತೆ ಮೇಲಿನ ಐತಿಹ್ಯಗಳಲ್ಲಿ ಸಾಮ್ಯತೆ ಇದೆ. ಆದರೆ ಥರ್ಸ್ಟನ್‌ರವರು ಹೇಳುವ ಕಥೆಯಲ್ಲಿನ ಗಾಜಿನ ಬಳೆ ತೊಡುವುದಿಲ್ಲ ಮತ್ತು ಒಲೆಗಳಿಗೆ ಹಿಂದೆ ತೂತಿರುತ್ತವೆಂಬ ವಿಚಾರ ತರ್ಕಾತೀತವೆನಿಸುತ್ತದೆ. ಅವರು ಗಾಜಿನ ಬಳೆ ತೊಡದೆ ಇರುವುದಕ್ಕೆ ಅವರು ಮಾಡುವಂತಹ ಕೆಲಸ ಕಾರ್ಯಗಳು ಕಾರಣವೇ ವಿನಃ ಬೇರೆ ಅಲ್ಲ ಮತ್ತು ಒಲೆಗಳಿಗೆ ಹಿಂದೆ ತೂತಿರುವುದು ಸರ್ವೇಸಾಮಾನ್ಯ ಸಂಗತಿಯಾಗಿದೆ.

ಎರಡನೇ ಐತಿಹ್ಯದ ಪ್ರಕಾರ ಒಮ್ಮೆ ಪಾರ್ವತಿ ದೇವಿಗೆ ತಿನ್ನುತ್ತಿದ್ದ ಆಹಾರ ಸಪ್ಪೆ ಎನಿಸಿತು. ಅದಕ್ಕೆ ಅವಳು ಶಿವನಿಗೆ ದೂರಿದಳು. ಆಗ ಶಿವನು ತನ್ನ ಒಂದು ಹನಿ ಬೆವರಿನಿಂದ ಒಬ್ಬ ಮನುಷ್ಯನನ್ನು ಸೃಷ್ಟಿಸಿ ಮಣ್ಣಿನಿಂದ ಉಪ್ಪನ್ನು ತಯಾರಿಸುವಂತೆ ಅಪ್ಪಣೆ ಮಾಡಿದನು. ಅವನು ಭೂಲೋಕಕ್ಕೆ ಬಂದು ಮಣ್ಣಿನಿಂದ ಉಪ್ಪನ್ನು ಮಾಡಿ ಶಿವ ಪಾರ್ವತಿಯರಿಗೆ ನೀಡಿದನು. ಅದರಿಂದ ಅವರು ಸಂತೋಷಗೊಂಡು ಅವರಿಗೆ ಉಪ್ಪಿನ ಉತ್ಪಾದನೆಯನ್ನೆ ಅವರ ವೃತ್ತಿಯಾಗಿ ಅನುಗ್ರಹಿಸಿದರಂತೆ.

ಮೂರನೇ ಐತಿಹ್ಯದ ಪ್ರಕಾರ ಒಮ್ಮೆ ಪಾರ್ವತಿಯು ತನ್ನ ಮನೆಗೆ ಗಣಂಗಳನ್ನು ಊಟಕ್ಕೆ ಆಹ್ವಾನಿಸಿದಳಂತೆ, ಬಂದ ಗಣಂಗಳಿಗೆಲ್ಲ ಬಡಿಸಿದ ಊಟ ಸಪ್ಪೆಯಾಗಿದ್ದುದರಿಂದ ಉಪ್ಪು ಹಾಕದ ಊಟವನ್ನು ತಾವು ಊಟ ಮಾಡವುದಿಲ್ಲವೆಂದು ಜರಿದು ತಿರಸ್ಕರಿಸಿದರು. ಆಗ ಪಾರ್ವತಿ ತನ್ನ ಬೆವರಿನಿಂದ ಚಿಕ್ಕಣ್ಣ ಮತ್ತು ಕರಿಯಣ್ಣ ಎಂಬ ಮಕ್ಕಳನ್ನು ಸೃಷ್ಟಿ ಮಾಡಿ ಚಿನ್ನದ ಗುದ್ದಲಿ ಮತ್ತು ರನ್ನದ ತಟ್ಟಿಯನ್ನು ಕೊಟ್ಟು ಕಳಿಸಿದಳು. ಅವರು ಭೂಲೋಕಕ್ಕೆ ಬಂದು ಉಪ್ಪಿನ ಮಣ್ಣಿನ ಕಟ್ಟೆ ಕಟ್ಟಿ ಕೇಲ್ಲುಂಡಿ ಮಾಡಿ ಮಣ್ಣಿನಿಂದ ಉಪ್ಪಿನ ರಸವನ್ನು ತೆಗೆದು ಉಪ್ಪನ್ನು ಮಾಡಿ ಎಲ್ಲರ ಊಟಕ್ಕೆ ಬಡಿಸಿದರು. ಆದ್ದರಿಂದ ಉಪ್ಪಾರರೆಲ್ಲ ಪಾರ್ವತಿಯ ಮಕ್ಕಳು ಎಂಬುದಾಗಿ ಹೇಳಿಕೊಳ್ಳುತ್ತಾರೆ. ಈ ಕಥೆ ಅಲ್ಪ–ಸ್ವಲ್ಪ ವ್ಯತ್ಯಾಸದೊಂದಿಗೆ ಎಲ್ಲಾ ಉಪ್ಪಾರರಲ್ಲೂ ಪ್ರಚಲಿತವಿದೆ.

**ಪಾರ್ವತಿ ಶಾಪ ಕೊಟ್ಟ ಕಥೆ**

ಒಮ್ಮೆ ಪಾರ್ವತಿಗೆ ತನ್ನ ಮಕ್ಕಳು ಎಷ್ಟೊಂದು ಕಷ್ಟ ಪಟ್ಟು ಉಪ್ಪು ಮಾಡುತ್ತಿದ್ದಾರೆ ಎಂದು ಮರುಕವುಂಟಾಗಿ ಅವರಿಗೆ ಊಟವನ್ನಾದರೂ ಕೊಡೋಣವೆಂದು ಊಟವನ್ನು ತೆಗೆದುಕೊಂಡು ಹೋದಳು. ಇವರು ದುಡಿದು ಸೋತು ಕುಳಿತ್ತಿದ್ದರು. ಪಾರ್ವತಿ ಊಟ ತೆಗೆದು ಕೊಂಡು ಬರುತ್ತಿದ್ದುದ್ದನ್ನು ಕಂಡು ತಾಯಿ ಎಂಬುದನ್ನು ಮರೆತು ಅವಳ ರೂಪಕ್ಕೆ ಮರುಳಾಗಿ ಅವಳನ್ನು ಮದುವೆಯಾಗಬೇಕೆಂದು ಪರಸ್ಪರರು ಅವಳು ತನಗೆ ಬೇಕು, ತನಗೆ ಬೇಕು ಎಂದು ಮಾತಾಡಿಕೊಳ್ಳುತ್ತಿದ್ದರು. ಪಾರ್ವತಿ ಹತ್ತಿರಕ್ಕೆ ಬಂದು ಇವರ ಮಾತುಗಳನ್ನು ಕೇಳಿಸಿಕೊಂಡು ಎಷ್ಟೊಂದು ದುಷ್ಟರಿದ್ದಾರೆ, ನಾನೇ ಸೃಷ್ಟಿ ಮಾಡಿದ ನನ್ನ ಬಗ್ಗೆಯೇ ಹೀಗೆ ಮಾತಾಡಿ ಕೊಳ್ಳುತ್ತಾರಲ್ಲ, ಇನ್ನು ಬೇರೆ ಹೆಣ್ಣು ಮಕ್ಕಳ ಬಗ್ಗೆ ಹೇಗೆ ಎಂದು ಭಾವಿಸಿ, ಕೋಪದಿಂದ ಹಕ್ಕಿ ಪಕ್ಷಿಗಳು ನೆರಳು ಸೇರಿದರೂ ಉಪ್ಪಾರರು ನೆರಳು ಸೇರುವುದು ಬೇಡವೆಂದು ಶಾಪ ಕೊಟ್ಟಳಂತೆ. ಆದರೂ ತನ್ನ ಮಕ್ಕಳ ಸ್ಥಿತಿಗೆ ಮರುಗಿದ ಪಾರ್ವತಿ ತನ್ನ ಮಕ್ಕಳಿಗಾಗಿ ಕುಂಬಳ ಕಾಯಿಯನ್ನು ಕೊಟ್ಟಳಂತೆ.

**ಕುಂಬಳ ಕಾಯಿ ಕೊಟ್ಟ ಕಥೆ**

ಶಿವನ ಮಕ್ಕಳು ಮತ್ತು ಪಾರ್ವತಿಯ ಮಕ್ಕಳು ಭೂಲೋಕದಲ್ಲಿ ತಮ್ಮ ಕೆಲಸಗಳನ್ನು ಮಾಡಿ ಕೊಂಡಿದ್ದರು. ಶಿವ ಪಾರ್ವತಿಯರು ಅದೇ ಮಾರ್ಗವಾಗಿ ಬರುತ್ತಿದ್ದರು. ಇತ್ತ ಪಾರ್ವತಿಯ ಮಕ್ಕಳಾದ ಉಪ್ಪಾರರು ಮತ್ತು ವಡ್ಡರು ಉಪ್ಪು ಮಾಡುವ ಮತ್ತು ಮಣ್ಣು ಅಗೆಯುವ ಕೆಲಸ ಮಾಡಿಕೊಂಡಿದ್ದರು. ಪಾರ್ವತಿಗೆ ತನ್ನ ಮಕ್ಕಳನ್ನು ನೋಡುವ ಆಸೆಯಾಗಿ ಮನುಷ್ಯ ರೂಪದಲ್ಲಿ ಬಂದು ನೀರು ಕೇಳಿದಳು. ಇವರು ನೀರು ಕೊಟ್ಟರು. ಆಗ ಅವಳು ತನ್ನ ಮಕ್ಕಳಿಗೆ ಏನಾದರೂ ಕೊಡಬೇಕೆಂದುಕೊಂಡು ತಾನು ಊರಿನಿಂದ ಬರುವಾಗ ಎರಡು ಕುಂಬಳ ಕಾಯಿ ತಂದಿದ್ದೆ ಮನೆಗೆ ಹೋಗಿ ಕೊಯ್ದುಕೊಂಡು ತಿನ್ನಿ ಎಂದು ಕೊಟ್ಟು ಹೋದಳು. ಅವರು ತೆಗೆದು ಕೊಂಡು ಹೋಗಿ ಸೆಟ್ಟಿಗೆ ಮಾರಿದರು. ಸೆಟ್ಟಿ ಕುಂಬಳ ಕಾಯಿಯನ್ನು ಮನೆಗೆ ತೆಗೆದುಕೊಂಡು ಹೋಗಿ ಕೊಯ್ದಾಗ ಅದರ ತುಂಬ ದುಡ್ಡು ಹೊನ್ನು ವರ ಹೆಚ್ಚುತ್ತಿದ್ದವಂತೆ. ಅದರೊಳಗಿದ್ದ ಲಕ್ಷ್ಮಿ ತಾನು ಹೋಗುತ್ತೇನೆಂದು ಹೊರಟಾಗ, ಸೆಟ್ಟಿ ತನಗೆ ಸ್ವಲ್ಪ ಕೆಲಸ ಇದೆ ನಾನು ಬರುವವರೆಗೆ ನೀನು ಇಲ್ಲೆ ಇರಬೇಕೆಂದು ಲಕ್ಷ್ಮಿಯಿಂದ ಭಾಷೆ ಪಡೆದು ಮನೆಯ ಹಿಂದಿನ ಬಾವಿಗೆ ಹೋಗಿ ಬಿದ್ದನು. ಸೆಟ್ಟಿ ವಾಪಾಸು ಬರಲಿಲ್ಲ. ಲಕ್ಷ್ಮಿ ಸೆಟ್ಟರ ಮನೆಯಿಂದ ಹೊರಗೆ ಬರಲಿಲ್ಲ. ಹೀಗೆ ಪಾರ್ವತಿ ದೇವಿ ತನ್ನ ಮಕ್ಕಳು ಕಷ್ಟ ಪಡಬಾರದೆಂದು ಕೊಟ್ಟ ಕುಂಬಳ ಕಾಯಿಯಲ್ಲಿದ್ದ ಲಕ್ಷ್ಮಿ ಸೆಟ್ಟರ

ಮನೆಯಲ್ಲಿ ಸ್ಥಿರವಾಗಿ ನಿಂತಳು. ನಮ್ಮ ಕಥೆ ಹೀಗಿದೆ ಎಂದು ತಮಗಿಲ್ಲದ ಸಂಪತ್ತಿನ ಬಗ್ಗೆ ಕಥೆ ಕಟ್ಟಿ ಹೇಳುತ್ತಾರೆ.

**ಬಂಗಾರವನ್ನು ಹೂತಿಟ್ಟ ಕಥೆ**

ಪಾರ್ವತಿ ಕೊಟ್ಟ ಕುಂಬಳ ಕಾಯಿಯೂ ತನ್ನ ಮಕ್ಕಳಿಗೆ ಧಕ್ಕದೆ ಹೋದಾಗ ಹೇಗಾದರೂ ಮಾಡಿ ತನ್ನ ಮಕ್ಕಳಿಗೆ ಅನುಕೂಲ ಮಾಡಿಕೊಡಬೇಕೆಂದುಕೊಂಡಳು. ಇತ್ತ ಉಪ್ಪಾರರು ಹೊಟ್ಟೆ ಪಾಡಿಗಾಗಿ ಮೇಲ್ಜಾತಿಯ ಶ್ರೀಮಂತರ ಹೊಲಗಳಲ್ಲಿ ಕೋಣಗಳ ಮೂಲಕ ಮಣ್ಣನ್ನು ಹೇರುತ್ತಿದ್ದರು. ಆಗ ಪಾರ್ವತಿ ತನ್ನ ಮಕ್ಕಳಿಗೆ ಅನುಕೂಲವಾಗಲೆಂದು ಬಂಗಾರದ ಗಂಟನ್ನು ನೆಲದಲ್ಲಿ ಹೂತಿಟ್ಟಳಂತೆ. ಆದರೆ ಇವರು ಆ ಭಾಗ ಎತ್ತರವಾಗಿದೆಯೆಂದು (ಬಂಗಾರವನ್ನು ಹೂತಿಟ್ಟ ಜಾಗ) ಆ ಭಾಗವನ್ನೆ ಸಾಕ್ಷಿ ಗುಡ್ಡೆಯಾಗಿ ಬಿಟ್ಟರೆಂದು ಅದನ್ನು 'ಪಾರ್ವತಿಗುಡ್ಡೆ' ಎಂದು ಕರೆಯುತ್ತಾರೆ.

**ಪಾರ್ವತಿ ಭೂಲೋಕದಲ್ಲಿ ನೆಲೆಗೊಂಡ ಕಥೆ**

ತಾನು ಹೂತಿಟ್ಟ ಬಂಗಾರವೂ ಕೂಡಾ ತನ್ನ ಮಕ್ಕಳಿಗೆ ದೊರೆಯದೆ ಹೋಯಿತು. ಆಗ ತನ್ನ ಮಕ್ಕಳ ದುಸ್ಥಿತಿಯನ್ನು ಕಂಡು ಕನಿಕರಗೊಂಡ ಪಾರ್ವತಿ ನೈವೇದ್ಯ ರೂಪದಲ್ಲಿ ನೀಡಿದ ಎಡೆಯನ್ನಾದರೂ ಉಂಡು ಜೀವಿಸಲಿ ಅಂತ ತಾನು ಭೂಲೋಕದಲ್ಲಿ ಉದ್ಭವಳಾದಳು. ಆದ್ದರಿಂದ ಇಡೀ ಭೂಲೋಕದಲ್ಲಿ ಸಪ್ತ ಮಾತೃಕೆಯರ ರೂಪದಲ್ಲಿ ನೆಲೆಸಿರುವ ಸ್ತ್ರೀ ದೇವತೆಗಳ ಪೂಜಾರರು ಉಪ್ಪಾರರೇ ಆಗಿದ್ದಾರೆಂದು ಕಥೆ ಹೇಳುತ್ತಾರೆ.

ಮೇಲಿನ ಎರಡು ಐತಿಹ್ಯಗಳನ್ನು ಗಮನಿಸಿದಾಗ ಪಾರ್ವತಿ ಪರಮೇಶ್ವರರು ತಮ್ಮ ಬೆವರಿನಿಂದ ಸೃಷ್ಟಿ ಮಾಡಿ ಕಳುಹಿಸಿದ ಮನುಷ್ಯರು ತಮ್ಮ ಕೆಲಸದಿಂದ ಶಿವ ಪಾರ್ವತಿಯರು ಸಂತೋಷಗೊಳ್ಳುವಂತೆ ಮಾಡಿದರು. ಆಗ ಶಿವ-ಪಾರ್ವತಿಯರು ಇವರಿಗೆ ಉಪ್ಪಿನ ಉತ್ಪಾದನೆಯನ್ನು ಅವರ ವೃತ್ತಿಯಾಗಿ ಅನುಗ್ರಹಿಸಿದರು. ಈ ಎರಡು ಐತಿಹ್ಯಗಳು ಆದಿಯಿಂದಲೂ ಉಪ್ಪನ್ನು ತಯಾರಿಸುತ್ತಾ ಬಂದಿರುವವರು ಉಪ್ಪಾರರೇ ಎಂಬುದನ್ನು ಸ್ಪಷ್ಟಪಡಿಸುತ್ತವೆ.

ಅನೇಕ ದ್ರಾವಿಡ ಕುಲಗಳು ತಮ್ಮ ಆರಾಧ್ಯ ದೈವವಾದ ಶಿವ ಪಾರ್ವತಿಯರಿಂದ ತಮ್ಮ ಉಗಮವನ್ನು ಹೇಳಿಕೊಳ್ಳುವಂತೆ ಉಪ್ಪಾರರು ತಮ್ಮ ಮೂಲದ ಬಗೆಗೆ ಈ ರೀತಿ ಕಥೆಗಳನ್ನು ಕಟ್ಟಿಕೊಂಡಿದ್ದಾರೆ. ಸದಾ ಕಾಲದಲ್ಲಿಯೂ ಎಲ್ಲ ಜಾತಿಗಳ ಒಡಲಿನಲ್ಲಿಯೂ ತಾನು ಸಾಮಾಜಿಕವಾಗಿ ಮೇಲಕ್ಕೇರಬೇಕೆಂಬ ಹಂಬಲ ಇದ್ದೆ ಇರುತ್ತದೆ. ಆದ್ದರಿಂದಾಗಿಯೇ ಈ ರೀತಿಯಲ್ಲಿ ತಳ ಸಮುದಾಯಗಳು ತಮ್ಮ ಮೂಲವನ್ನು ವೈಭವೀಕರಿಸಿಕೊಳ್ಳುವ ಕೆಲಸವನ್ನು ಮಾಡುತ್ತಿರುತ್ತವೆ. ಅಂತೆಯೆ ಉಪ್ಪಾರರೂ ತಮ್ಮ ಮೂಲವನ್ನು ವೈಭವೀಕರಿಸಿಕೊಂಡಿದ್ದಾರೆ.

ಮುಖ್ಯವಾಗಿ 'ಬುಡಕಟ್ಟುಗಳು ಮತ್ತು ತಳಸಮುದಾಯಗಳಲ್ಲಿನ ಸೃಷ್ಟಿ ಪುರಾಣಗಳನ್ನು ಗಮನಿಸಿದಾಗ ಅವರ ಸಮುದಾಯ ಅಥವ ಅವರು ಕಲ್ಪಿಸಿಕೊಂಡ ತಮ್ಮ ಜಗತ್ತಿನ ಮೂಲ ಪುರುಷ ಬೆವರು ಮತ್ತು ಮಣ್ಣಿನಿಂದ ಹುಟ್ಟಿ ಬಂದಿರುವುದನ್ನು ಕಾಣುತ್ತೇವೆ. ಮಣ್ಣು ಮತ್ತು ಬೆವರು ಶ್ರಮ ಸಂಸ್ಕೃತಿಯ ಸಂಕೇತಗಳಾಗಿವೆ. ಶ್ರಮ ಜೀವಿಗಳಾದ ಈ ಸಮುದಾಯಗಳು ಬೆವರು ಮತ್ತು ಮಣ್ಣಿಗೆ ಹೆಚ್ಚು ಪ್ರಾಧ್ಯಾನ್ಯತೆ

ನೀಡಿರುವುದು ಮತ್ತು ಬೆವರಿನಿಂದ, ಮಣ್ಣಿನಿಂದ ಜನಿಸಿದರು ಎಂದರೆ ಈ ಭೂಮಿಯಲ್ಲಿ ಸತತ ಪರಿಶ್ರಮದಿಂದ ತಮ್ಮ ಅಸ್ತಿತ್ವವನ್ನು ಕಂಡು ಕೊಂಡರು ಎಂದರ್ಥ'. ಉಪ್ಪಾರರು ನಿರ್ವಹಿಸಿಕೊಂಡು ಬಂದಿರುವ ವೃತ್ತಿಗಳ ಹಿನ್ನೆಲೆಯಲ್ಲಿ ಮೇಲಿನ ಮಾತುಗಳನ್ನು ಗಮನಿಸಿದಾಗ ಉಪ್ಪಾರರು ನಿಜವಾಗಿಯೂ ಮಣ್ಣಿನ ಮಕ್ಕಳು, ಬೆವರಿನ ಮೂಲಕ ತಮ್ಮ ಅಸ್ತಿತ್ವವನ್ನು ಸ್ಥಾಪಿಸಿಕೊಂಡವರು ಎಂಬ ಅಂಶ ಸ್ಪಷ್ಟವಾಗುತ್ತದೆ.

ಇನ್ನು ಪಾರ್ವತಿ ಮತ್ತು ಉಪ್ಪಾರರಿಗೆ ಸಂಬಂಧಪಟ್ಟ ಕಥೆಗಳನ್ನು ಗಮನಿಸಿದಾಗ ಉಪ್ಪಾರರು ದ್ರಾವಿಡ ಮೂಲದವರೆಂಬುದು ಮತ್ತು ಗಣಪತಿಯ ಹುಟ್ಟಿನ ರೀತಿಯಲ್ಲಿಯೇ ಉಪ್ಪಾರರ ಹುಟ್ಟು ಆಯಿತು ಎಂದು ಹೇಳುವ ಕಥೆ ಕುತೂಹಲಕಾರಿಯಾಗಿದೆ. ಉಪ್ಪಾರರು ಮತ್ತು ಪಾರ್ವತಿಗೆ ಸಂಬಂಧಪಟ್ಟ ಕಥೆಗಳನ್ನು ಗಮನಿಸಿದಾಗ ವಾಸ್ತವಕ್ಕೆ ತುಂಬಾ ಹತ್ತಿರವಾದ ಸಂಗತಿಗಳು ಕಥೆಗಳಲ್ಲಿ ಹುದುಗಿರುವುದು ಗೋಚರವಾಗುತ್ತದೆ. ದೂರದಲ್ಲಿ ಪಾರ್ವತಿಯನ್ನು ಕಂಡು ಮೋಹಗೊಂಡಿದ್ದು, ಅವಳು ಶಾಪಕೊಟ್ಟಿದ್ದು, ಮತ್ತೆ ತನ್ನ ಮಕ್ಕಳ ಸ್ಥಿತಿಗೆ ಮರುಗಿ ಕುಂಬಳ ಕಾಯಿ ಕೊಟ್ಟಿದ್ದು, ಅದೂ ಧಕ್ಕದೆ ಹೋದಾಗ ಮಣ್ಣಿನಲ್ಲಿ ನಗನಾಣ್ಯಗಳನ್ನು ಹೂತಿಟ್ಟದ್ದು, ಅದೂ ಕೂಡಾ ಸಿಗದೇ ಹೋದಾಗ ತಾನೇ ಭೂಲೋಕದಲ್ಲಿ ಶಕ್ತಿ ದೇವತೆಯರಾದ ಸಪ್ತ ಮಾತೃಕೆಯರ ರೂಪದಲ್ಲಿ ಉದ್ಭವಳಾದಳು. ಹಾಗಾಗಿ ಎಲ್ಲ ಹೆಣ್ಣು ದೇವತೆಗಳ ಪೂಜಾರರು ಉಪ್ಪಾರರು ಮತ್ತು ಬಹುತೇಕ ಕೆಳಜಾತಿಗಳಾಗಿರುವುದು ಕಥೆಗಳಲ್ಲಿ ಕಂಡುಬರುವುದನ್ನು ಗಮನಿಸಿದಾಗ ಉಪ್ಪಾರರು ಶಕ್ತಿ ದೇವತೆಯ ಆರಾಧಕರಾದ ಶಾಕ್ತೇಯರೆಂಬುದು ಸ್ಪಷ್ಟವಾಗುತ್ತದೆ.

**ಪುರಾಣಗಳು**

ಜನಪದ ಗದ್ಯ ನಿರೂಪಣೆಗಳಾದ ಪುರಾಣಗಳಿಗೂ ಐತಿಹ್ಯಗಳಿಗೂ ನಿಕಟ ಸಂಬಂಧವಿರುತ್ತದೆ. 'ಪುರಾಣವೆಂದರೆ ಹಿಂದೆ ನಡೆದವುಗಳೆಂದೇ ಹೇಳಲಾಗುವ ಅತಿ ಮಾನುಷ ವ್ಯಕ್ತಿಗಳ, ದೈವ ದೇವರುಗಳ, ಸಾಂಸ್ಕೃತಿಕ ವೀರ ಪುರುಷರ ಸಾಹಸ ಮಹಿಮೆ ಪವಾಡಗಳನ್ನು ಪುರಾತನ ಸಂಪ್ರದಾಯ ಹಾಗು ಧಾರ್ಮಿಕ ನಂಬಿಕೆಗಳನ್ನು ವಿವರಿಸುವ ಕಥೆಗಳನ್ನು ಪುರಾಣ' (Myth) ಎಂದು ಕರೆಯಲಾಗುತ್ತದೆ. ಪುರಾಣಗಳೆಂದರೆ, 'ಒಂದು ಕಾಲಕ್ಕೆ ಅದು ಕಟ್ಟು ಕಥೆ, ಅವಿದ್ಯಾವಂತ ಅನಾಗರಿಕ ಜನಸಮುದಾಯಗಳ ಕಾಲ್ಪನಿಕ ಸೃಷ್ಟಿ' ಎಂಬ ಅಭಿಪ್ರಾಯವಿತ್ತು. ಆದರೆ ಇಂದು 'ಪುರಾಣಗಳೆಂದರೆ ಅವು ಕಟ್ಟು ಕಥೆಗಳಲ್ಲ, ಕಾಲ್ಪನಿಕ ಸೃಷ್ಟಿಯಲ್ಲ, ಒಂದು ಜನಸಮುದಾಯದ ಸಂದೇಶ, ಘಟನೆ ಇತಿಹಾಸ' ಎಂಬುದಾಗಿ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ.

ಆದ್ದರಿಂದ ಇಂದು ಪ್ರತಿಯೊಂದು ಸಮುದಾಯದ ಅಧ್ಯಯನ ಮಾಡಬೇಕಾದರೆ ಆ ಸಮುದಾಯದಲ್ಲಿರುವ ಪುರಾಣಗಳ ಅಧ್ಯಯನ ಅತ್ಯಂತ ಮಹತ್ವ ಪಡೆದುಕೊಳ್ಳುತ್ತದೆ. 'ಸಮುದಾಯದ ಇತಿಹಾಸವನ್ನು ರಚಿಸುವಲ್ಲಿ ಪುರಾಣಗಳು ಪೋಷಕ ಅಥವ ಪೂರಕ ಸಾಮಗ್ರಿಗಳಾಗಿ ನೆರವೀಯುತ್ತವೆ'. ಯಾವುದೇ ಬುಡಕಟ್ಟು ಅಥವ ಸಮುದಾಯಗಳು ಕಲ್ಪಿಸಿ ಕೊಳ್ಳುವ ಸೃಷ್ಟಿ ಪುರಾಣಗಳು ತಮ್ಮ 'ಜನಾಂಗದ ಮೂಲ ಪುರುಷನು ದೈವಾಂಶ ಸಂಭೂತನಾಗಿ ಹುಟ್ಟಿ ಬಂದು ತಮ್ಮ ಜನಾಂಗವನ್ನು ಬೆಳಸಿದನೆಂಬ ಪರಿಕಲ್ಪನೆ ಮತ್ತು ತಮ್ಮ ಜನಾಂಗದ ಮೂಲ ಪುರುಷನಿಂದಲೇ ಮಾನವ ಸಂತತಿ ಬೆಳೆದು ಬಂದಿದೆ ಎಂಬ ಪರಿಕಲ್ಪನೆ ಪುರಾಣಗಳಲ್ಲಿರುತ್ತದೆ'. ಈ ಹಿನ್ನೆಲೆಯಲ್ಲಿ ಉಪ್ಪಾರರು ಕಲ್ಪಿಸಿ ಕೊಂಡಿರುವ ಪುರಾಣಗಳ ಅವಲೋಕನ ಮಾಡಿದಾಗ ಕುತೂಹಲದಾಯಕವಾದ ಅಂಶಗಳು ಲಭ್ಯವಾಗುತ್ತವೆ.

ಉಪ್ಪಾರರನ್ನು ಕುರಿತಂತೆ ಎರಡು ಪೌರಾಣಿಕ ಕಥೆಗಳಿವೆ. ಮೊದಲನೇಯದು ಜಮದಗ್ನಿ ಕಾರ್ತವೀರ್ಯಾರ್ಜುನರ ಯುದ್ಧ, ಎರಡನೇಯದು ಅಯೋಧ್ಯಾ ಕ್ಷತ್ರಿಯರ ಮೂಲ ಪುರುಷನಾದ ಸಗರ ಮತ್ತು ಅವನ ವಂಶಸ್ಥರಾದ ಭಗೀರಥ, ದಶರಥ ಮತ್ತು ರಾಮರಿಗೆ ಸಂಬಂಧಿಸಿದ್ದು.

ಕ್ಷತ್ರಿಯನಾದ ಕಾರ್ತವೀರ್ಯಾರ್ಜುನ ತನಗೆ ಸಲ್ಲದ ಕಾಮಧೇನುವಿಗೆ ಆಸೆ ಪಟ್ಟು ಅಹಂಕಾರವಶನಾಗಿ ತಮ್ಮನ್ನು ಸತ್ಕರಿಸಿದ ಜಮದಗ್ನಿಯನ್ನು ಕೊಲ್ಲುತ್ತಾನೆ. ಜಮದಗ್ನಿಯ ಮಗನಾದ ಪರಶುರಾಮನು ತಾಯಿಯಾದ ರೇಣುಕೆಯ ಬುದ್ಧಿಯ ಮಾತುಗಳನ್ನು ಕೇಳದೆ ಕ್ಷತ್ರಿಯರನ್ನೆಲ್ಲಾ ನಾಶ ಮಾಡುವ ಪ್ರತಿಜ್ಞೆ ಮಾಡುತ್ತಾನೆ. ಪರಶುರಾಮನ ಸೇಡಿನಿಂದ ಪಾರಾಗುವ ಸಲುವಾಗಿ ಕ್ಷತ್ರಿಯರೆಲ್ಲಾ ಕ್ಷಾತ್ರಧರ್ಮವನ್ನು ತ್ಯಜಿಸಿ ಕೆಲ ಕಾಲ ತಲೆಮರೆಸಿಕೊಳ್ಳುತ್ತಾರೆ. ಇತ್ತ ದಶರಥ ಮದುವೆಯ ಸುಳ್ಳು ನೆಪವೊಡ್ಡಿ ತಾನು ಮತ್ತು ತನ್ನ ಮಕ್ಕಳು ಪರಶುರಾಮನಿಂದ ಪಾರಾಗುತ್ತಾರೆ. ಹೀಗೆ 'ಪಾರಾದ ಸೂರ್ಯವಂಶ ಕ್ಷತ್ರಿಯರೆ ಉಪವೀರರೆಂದೂ ಮತ್ತು ಮಣ್ಣಿನಿಂದ ಉಪ್ಪು ತಯಾರಿಸಿದ್ದರಿಂದ ಲವಣಕಾರ, ಕ್ಷಾರಕಾರ, ಉಪ್ಪಾರರು' ಎಂದು ಕರೆಸಿಕೊಂಡರು.

ಮತ್ತೊಂದು ಕಥೆಯ ಪ್ರಕಾರ ಉಪ್ಪಾರರು ತಮ್ಮ ಮೂಲವನ್ನು ಕುರಿತಂತೆ ಕಲ್ಪಿಸಿ ಕೊಂಡಿರುವ ಸೃಷ್ಟಿ ಪುರಾಣಗಳಲ್ಲಿ ಅತ್ಯಂತ ಪ್ರಸಿದ್ಧವಾದುದು ಸಗರ ಮತ್ತು ಅವನ ನಾಲ್ಕನೆಯ ತಲೆಮಾರಿನವನಾದ ಭಗೀರಥನ ಕಥೆ. ಈ ಕಥೆ ಇವರಲ್ಲಿ ಹೆಚ್ಚು ಪ್ರಚಲಿತ ಮತ್ತು ಪ್ರಸಿದ್ಧವಾಗಿದೆ. ಒಮ್ಮೆ ಸಗರನು ಅಶ್ವಮೇಧಯಾಗವೊಂದನ್ನು ಕೈಗೊಂಡನು. ಕುದುರೆಯ ಬೆಂಗಾವಲಿಗೆ ಮೊಮ್ಮಗನಾದ ಅಂಶುಮಂತನಿದ್ದನು. ಇಂದ್ರ ಸಗರನ ಶ್ರೇಯಸ್ಸನ್ನು ಸಹಿಸದೆ ಅಶ್ವವನ್ನು ಅಪಹರಿಸಿ ಪಾತಾಳ ಲೋಕದಲ್ಲಿ ತಪೋನಿರತರಾಗಿದ್ದ ಕಪಿಲ ಮಹರ್ಷಿಗಳ ಆಶ್ರಮದ ಹಿಂದೆ ಬಚ್ಚಿಟ್ಟನು. ಇತ್ತ ಸಗರ ಯಜ್ಞಾಶ್ವವನ್ನು ಹುಡುಕಿ ತರಲು ತನ್ನ ಅರವತ್ತು ಸಾವಿರ ಜನ ಮಕ್ಕಳನ್ನು ಕಳಿಸಿಕೊಟ್ಟನು. ಅವರು ಭೂಮಂಡಲವನ್ನೆಲ್ಲಾ ಹುಡುಕಿ ಕಾಣದೆ ಕೊನೆಗೆ ಭೂತಳವನ್ನೇ ಭೇದಿಸಿ ರಸಾತಳವನ್ನು ಹೊಕ್ಕರು. ಅಲ್ಲಿ ಯಜ್ಞಾಶ್ವವನ್ನು ಕಂಡು ಈ ಮಹರ್ಷಿಯೆ ನಮ್ಮ ಯಜ್ಞಾಶ್ವವನ್ನು ಕದ್ದಿರಬೇಕೆಂದು ಭಾವಿಸಿ ಮುನಿಯ ಕೋಪಕ್ಕೆ ತುತ್ತಾಗಿ ಸುಟ್ಟು ಬೂದಿಯಾದರು.

ಕಾಲಾನಂತರ ಭಗೀರಥನು ಗಂಗೆಯನ್ನು ತನ್ನ ತಪಸ್ಸಿನಿಂದ ಒಲಿಸಿ ರಸಾತಳದಲ್ಲಿ ಭಸ್ಮ ರಾಶಿಯಾಗಿ ಬಿದ್ದಿದ್ದ ತನ್ನ ಪೂರ್ವಿಕರ ಭಸ್ಮ ರಾಶಿಯ ಮೇಲೆ ಗಂಗೆಯನ್ನು ಹರಿಸಿ ಸಗರ ಪುತ್ರರೆಲ್ಲ ಸದ್ಗತಿಯನ್ನು ಪಡೆಯುವಂತೆ ಮಾಡಿದನು. ಹೀಗೆ ಸಗರ ಪುತ್ರರು ಬಗೆದ ಭೂಮಿಯ ತಗ್ಗುಗಳೇ ಮುಂದೆ ಭಗೀರಥನ ತಪಸ್ಸಿನಿಂದ ಭೂಲೋಕಕ್ಕೆ ಇಳಿದು ಬಂದ ಗಂಗೆಯಿಂದ ತುಂಬಿ ಸಾಗರಗಳಾದವು. ಸಗರನ ಮಕ್ಕಳ ಭಸ್ಮ ರಾಶಿಯ ಮೇಲೆ ಹರಿದ ಗಂಗೆಯಿಂದ ಭಸ್ಮವು ಸಾಗರವನ್ನು ಸೇರಿ ಸಾಗರವೆಲ್ಲಾ ಉಪ್ಪಾಯಿತು. ಅಂದಿನಿಂದ 'ಸಗರ ವಂಶಸ್ಥರೆಲ್ಲ ಉಪ್ಪನ್ನು ತಯಾರಿಸುವ ಕೆಲಸವನ್ನು ಕಾಶಿ ಪ್ರದೇಶದಲ್ಲಿ ಆರಂಭಿಸಿದರಂತೆ. ಈ ವಂಶದಿಂದ ಬಂದವರಿಗೆ ಸಗರ ವಂಶಸ್ಥರು' ಎಂದು ಕರೆಯುತ್ತಾರೆ. ಹೀಗೆ ಸಗರ ಮತ್ತು ಭಗೀರಥರೊಡನೆ ಉಪ್ಪಾರರು ತಮ್ಮ ಪರಂಪರೆಯನ್ನು ಗುರ್ತಿಸಿಕೊಳ್ಳುತ್ತಾರೆ. ಎಚ್. ವಿ. ನಂಜುಂಡಯ್ಯ ಮತ್ತು ಎಲ್. ಕೆ. ಅನಂತಕೃಷ್ಣ ಅಯ್ಯರ್ ಕೂಡಾ ಈ ಕಥೆಯನ್ನು ತಮ್ಮ ಕೃತಿಯಲ್ಲಿ ಉಲ್ಲೇಖಿಸಿದ್ದಾರೆ.

ವಿಷ್ಣುಪುರಾಣದಲ್ಲೂ ಸಗರನ ವೃತ್ತಾಂತ ಸಾಗರದ ಹುಟ್ಟಿಗೆ ಸಂಬಂಧಿಸಿದಂತೆ ಪ್ರವೇಶ ಪಡೆದಿರುವುದನ್ನು ಕಾಣಬಹುದು. 'ಬಂಗಾಲ ಉಪ ಸಾಗರವನ್ನು ಅಗೆದದ್ದು ಸಗರ ಕುಲವೆಂಬುದು ಇಲ್ಲಿಯ ಕಲ್ಪನೆಯಾಗಿದೆ'. ಇದೇ ರೀತಿ ಥರ್‌ಸ್ಟನ್‌ನಲ್ಲೂ ವಿಷ್ಣು ಪುರಾಣದ ಸಗರನ ವೃತ್ತಾಂತದ ಪ್ರಸ್ತಾಪವಿದೆ. ಅಸಿತ ಅಥವ ಬಾಹುಕ, ಇವನ ಮಗ ಸಗರ, ಬಾಹುಕ ಹೈಹಯ ಮತ್ತು ತಾಳಜಂಘರಿಂದ ಸೋತು ಅರಣ್ಯ ಸೇರಿದ. ಔರ್ವ ಮುನಿಯ ಆಶ್ರಮದ ಹತ್ತಿರ ಬಾಹುಕನ ಪತ್ನಿ ಯಾದವಿ ಗರ್ಭಿಣಿಯಾದಳು. ಸವತಿ ಅವಳಿಗೆ ವಿಷ ಉಣಿಸಿದಳು. ಬಾಹುಕ ಮುಪ್ಪಿನಿಂದ ಸತ್ತು ಹೋದ, ಯಾದವಿ ತಾನು ಸತಿಸಹಗಮನ ಆಚರಿಸುವುದಾಗಿ ತಿಳಿಸಿದಳು. ಆದರೆ ಔರ್ವ ಮುನಿಯು ನೀನು ಓರ್ವ ಸಾಮ್ರಾಟನಾದ ಮಗನಿಗೆ ಜನ್ಮ ನೀಡುವೆಯೆಂದು, ಆಕೆ ಸತಿಯಾಗುವುದನ್ನು ತಡೆದನು. ಆಕೆ ಮಗುವಿಗೆ ಜನ್ಮವಿತ್ತಳು. ಮಗುವಿನ ಜೊತೆ ವಿಷವೂ ಹೊರಬಂತು. ವಿಷದ ಜೊತೆ ಹುಟ್ಟಿದ ಮಗುವಿಗೆ ಮುನಿ ಸಗರ (ಸ+ಗರ=ವಿಷಸಹಿತ) ಎಂದು ಹೆಸರಿಟ್ಟ. ನಂತರ ಸಗರ ತನ್ನ ತಂದೆಯ ಶತ್ರುಗಳನ್ನು ನಾಶ ಮಾಡಿ ಸಾಮ್ರಾಜ್ಯವನ್ನು ಮರು ಸ್ಥಾಪಿಸಿದ. ಮುಂದೆ ಯಜ್ಞಾಶ್ವದ ಅಪಹರಣ, ಯಜ್ಞಾಶ್ವವನ್ನು ಹುಡುಕುತ್ತಾ ಪಾತಾಳಕ್ಕೆ ಬಂದು ಕಪಿಲ ಮಹರ್ಷಿಯ ಕೆಂಗಣ್ಣಿಗೆ ಗುರಿಯಾಗಿ ಸುಟ್ಟು ಬೂದಿಯಾದರು. ನಂತರ ಭಗೀರಥ ಗಂಗೆಯನ್ನು ಭೂಮಿಗೆ ಬರಿಸಿ ಸತ್ತವರಿಗೆ ಸದ್ಗತಿ ದೊರೆಯುವಂತೆ ಮಾಡಿದನು. ಸಗರನ ಮಕ್ಕಳು ಅಗೆದ ಆ ಪ್ರದೇಶವೇ ಬಂಗಾಳ ಸಾಗರವಾಯಿತು. ವಿಷ್ಣು ಪುರಾಣದ ಸಗರ ವೃತ್ತಾಂತದೊಂದಿಗೂ ತಮ್ಮ ಮೂಲವನ್ನು ಸಮೀಕರಿಸಿಕೊಳ್ಳುತ್ತಾರೆ. ಇದರಿಂದಾಗಿ ಉಪ್ಪಾರರು ತಾವು ಸಗರ ಕುಲದವರೆಂದು ಹೇಳಿಕೊಳ್ಳುತ್ತಾರೆ. ಸಗರನ ಮಕ್ಕಳು ಸಾಗರವನ್ನು ಅಗೆದಂತೆ ಅವನ ಕುಲದವರಾದ ತಾವು ಕೆರೆ, ಕಾಲುವೆ, ಬಾವಿಗಳನ್ನು ಅಗೆಯುತ್ತೇವೆಂದು........ As his sons excavated the ocean, so they dig tanks, channels, wells etc. ಎಂದು ಹೇಳಿಕೊಳ್ಳುತ್ತಾರೆ.

ಸ್ಕಂದ ಪುರಾಣದ ಉಮಾಮಹೇಶ್ವರ ಸಂವಾದದಲ್ಲಿ ಪರಮೇಶ್ವರನು ಪಾರ್ವತಿಯನ್ನು ಕುರಿತು ಉಪವೀರರ (ಉಪ್ಪಾರರ) ವಿಷಯವಾಗಿ ಹೇಳುತ್ತಾ "ಕ್ಷತ್ರಿಯ ವಂಶೀಯರಾದ ಅವರು ಉಪವೀರ ಎಂಬ ಹೆಸರಿನಿಂದ ಜಗತ್ತಿನಲ್ಲಿರುತ್ತಾ ಪರಶುರಾಮನ ಭಯದಿಂದ ತಮ್ಮ ರಾಜ್ಯ, ಕೋಶ, ಧನಾದಿಗಳನ್ನು ಬಿಟ್ಟು ಮಹಾ ದುಃಖದಿಂದ ವೇಷವನ್ನು ಬದಲಾಯಿಸಿ ಕೊಂಡು ದೇಶದ ಅನೇಕ ಕಡೆಗಳಲ್ಲಿ ವಾಸಿಸುತ್ತಿದ್ದಾರೆ. ಅವರು ತಮ್ಮ ಜೀವನಾರ್ಥಕವಾಗಿ ಚೌಳು (ಸೌಳು) ಮಣ್ಣನ್ನು ಸಂಗ್ರಹಿಸಿ ಅದರಿಂದ ಉಪ್ಪನ್ನು ತಯಾರಿಸುತ್ತಲಿಹರು. ಇದರಿಂದ ಇವರನ್ನು ಲವಣಕಾರರೆಂದು ಕರೆಯುತ್ತಿದ್ದಾರೆ.

ಮೇಲಿನ ಪುರಾಣಗಳಲ್ಲಿ ಬಹುತೇಕ ತಳಸಮುದಾಯಗಳು ತಮ್ಮ ಮೂಲವನ್ನು ಪುರಾಣೀಕರಿಸಿಕೊಳ್ಳುವಂತೆ ಉಪ್ಪಾರರೂ ತಮ್ಮ ಮೂಲವನ್ನು ಪುರಾಣೀಕರಿಸಿ ಕೊಂಡಿರುವುದನ್ನು ನೋಡಬಹುದು. 'ಸ್ವಪ್ರತಿಷ್ಠೆ, ಆತ್ಮ ಗೌರವ ಮತ್ತು ಸ್ವಾಭಿಮಾನಗಳನ್ನು ರಕ್ಷಿಸಿಕೊಳ್ಳುವ ಸಲುವಾಗಿ, ಅತೃಪ್ತ ಆಸೆ, ಆಕಾಂಕ್ಷೆ ಸ್ವಪ್ನ ಸಾಹಸಗಳಿಗೆ ಅಭಿವ್ಯಕ್ತಿ ನೀಡುವ ಸಲುವಾಗಿ ತನ್ನ ವಂಶದ ಹುಟ್ಟು ಬೆಳವಣಿಗೆಗಳ ಬಗೆಗೆ ಕಲ್ಪನಾ ಸಾಧ್ಯವಾದ ಪೌರಾಣಿಕ ಕಥೆಯನ್ನು ನೇಯುವುದು ಅಥವಾ ಚಾಲ್ತಿಯಲ್ಲಿರುವ, ಸಮಾಜ ಒಪ್ಪಿಕೊಂಡು ಗೌರವಿಸುವ ಪೌರಾಣಿಕ ಕಥೆಯೊಳಗೆ ತಮ್ಮ ಮೂಲವನ್ನು ಕುರಿತಾದ ಉಪಕಥೆಯನ್ನು

ಸೇರಿಸುವುದು ಆದಿ ಮಾನವ ಕಾಲದಿಂದಲೂ ಬೆಳೆದು ಬಂದಿರುವ ಮಾನವ ಸಹಜ ಮೂಲಾಶಯವೆಂಬುದಂತೂ ನಿಜ' ಎಂಬ ಮಾತುಗಳು ಪುರಾಣಗಳ ಮಹತ್ವವನ್ನು ಸೂಚಿಸುತ್ತವೆ.

**ಉಪಸಂಹಾರ**

ಈ ಹಿನ್ನೆಲೆಯಲ್ಲಿ ಉಪ್ಪಾರರ ಮೂಲವನ್ನು ಕುರಿತಂತೆ ಪುರಾಣಗಳನ್ನು ಪರಿಭಾವಿಸಿದಾಗ ಇತಿಹಾಸ ಕಾಲದಿಂದಲೂ ಉಪ್ಪಾರರು ಬರೀ ಉಪ್ಪನ್ನಷ್ಟೇ ಮಾಡಿಲ್ಲ. ಜೊತೆಗೆ ಕೃಷಿಗೆ ಅಗತ್ಯವಾದ ಬಾವಿ, ಕೆರೆ, ಕಟ್ಟೆ, ಕಾಲುವೆ, ಅರಸೊತ್ತಿಗೆಗೆ ಬೇಕಾದ ಕೋಟೆ ಕೊತ್ತಲಗಳನ್ನು ನಿರ್ಮಿಸಿದ್ದಾರೆ ಎನ್ನುವ ಐತಿಹಾಸಿಕ ಪ್ರಾಮುಖ್ಯತೆ ಅವರ ಮೂಲವನ್ನು ಕುರಿತಂತಹ ಪುರಾಣಗಳಲ್ಲಿ ಅತಿಶಯೋಕ್ತಿ ಮತ್ತು ಕಲ್ಪನೆಗಳಿಂದ ರಮ್ಯೀಕರಿಸಲ್ಪಟ್ಟಿರುವುದನ್ನು ಕಾಣುತ್ತೇವೆ. ಸಗರ ಚಕ್ರವರ್ತಿ, ಸಾಗರ ನಿರ್ಮಾಣ, ಭಗೀರಥ ಪ್ರಯತ್ನದಂತಹ ನಿದರ್ಶನಗಳು ಇದನ್ನು ಸ್ಪಷ್ಟಪಡಿಸುತ್ತವೆ. ಇವುಗಳನ್ನು ಪೌರಾಣಿಕ ಕಲ್ಪನೆಗಳೆಂದು ತಳ್ಳಿಹಾಕುವಂತಿಲ್ಲ. ಇವುಗಳ ಒಡಲಿನಲ್ಲಿ ಹುದುಗಿರುವ ಸತ್ಯದ ದರ್ಶನವನ್ನು ಮಾಡಿಕೊಳ್ಳಬೇಕಾಗಿದೆ.

**ಪರಾಮರ್ಶನ ಗ್ರಂಥಗಳು**


- ಗಂಗಾಧರ ದೈವಜ್ಞ, (2000). ಬುಡಕಟ್ಟು ಸಮಾಜ: ಹುಟ್ಟು ಸಾವಿನ ನಡುವೆ. ಪ್ರಸಾರಾಂಗ. ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.
- ಪ್ರಜಾವಾಣಿ ದಿನಾಂಕ (ಜೂನ್ 16, 2009). ಬೆಂಗಳೂರು.
- ಮೈತ್ರಿ. ಕೆ. ಎಂ. (2002). ಬುಡಕಟ್ಟು ಕುಲಕಸುಬುಗಳು. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.
- ರಾಜಶೇಖರ ಪಿ.ಕೆ. (ಸಂ.) (2010). ಜನಪದ ವೀರ ಕಾವ್ಯ ಪಿರಿಯಾಪಟ್ಟಣ ಕಾಳಗ. ಅನ್ನಪೂರ್ಣ ಪಬ್ಲಿಷಿಂಗ್ ಹೌಸ್, ಬೆಂಗಳೂರು.
- ವಿಜಯ ಕರ್ನಾಟಕ (ಡಿಸೆಂಬರ್ 28, 2008). ವಿಶೇಷ ಪುರವಣಿ, ಬೆಂಗಳೂರು.
- ಹಿರೇಮಠ ಎಸ್.ಎಸ್. (1998). ಉಪ್ಪಾರರು. ತಾಲೂಕು ಉಪ್ಪಾರ ನೌಕರರ ಸಂಘ, ಹರಪನಹಳ್ಳಿ.
- ಸುಬ್ಬಣ್ಣ ರೈ ಎ. (1994). ದಕ್ಷಿಣ ಕನ್ನಡ ಜಿಲ್ಲೆಯ ಐತಿಹ್ಯಗಳು. ಕನ್ನಡ ವಿಭಾಗ. ಮುಂಬೈ ವಿಶ್ವವಿದ್ಯಾಲಯ, ಮಹಾರಾಷ್ಟ್ರ.
- ಶ್ರೀ ಲೇಪಾಕ್ಷ ಮಹಾಸ್ವಾಮಿಗಳು. (1999). ಶ್ರೀ ಉಪ್ಪಾರ ಚರಿತಾಮೃತ. ಭಗೀರಥ ಸಂಕಲ್ಪ ಟ್ರಸ್ಟ್, ಕುಷ್ಟಗಿ, ಕೊಪ್ಪಳ ಜಿಲ್ಲೆ.
- Edgar Thurston and K. Rangachari. (1987). Castes and tribes of southern India Vol-VII. Asian educational service, New Delhi.
- Nanjundaiah. H. V and L.K Anantaha Krishna Iyer. (1928). The Mysore tribes and castes, Vol- IV, Mittal Publications. New Delhi.